ANUBHAVS



# ಭಯ ಪಡಬೇಡ

© Copyright 2010, Manasamarthyadata.com

manasamarthyadata.com

*- ಶ್ರೀ ಸಂತೋಷ್ ಲೋಲಯೇಕರ್, ಮಡ್‌ಗಾಂವ್, ಗೋವಾ*

*ಜೇ ಕಾ ರಾಂಜಲೇ ಗಾಂಜಲೇ,*
*ತ್ಯಾಸ್ಸೀ ಮ್ಹಣೇ ಜೋ ಆಪುಲೇ*
*ತೋಚಿ ಸಾಧು ಓಳಕಾವಾ,*
*ದೇವ ತೇಥೇಚೀ ಜಾಣಾವಾ!*

ಇಂದಿನ ಜಗತ್ತಿನಲ್ಲಿ ಪ್ರತಿಯೊಬ್ಬ ಮನುಷ್ಯ ಪ್ರಾಣಿಯೂ ಕೂಡಾ ಯಾವುದಾದರೊಂದು ವಿಷಯದಲ್ಲಿ ಕಷ್ಟ ಪಡುತ್ತಲೇ ಇರುತ್ತಾನೆ. ಕೆಲವರಿಗೆ ಮಾನಸಿಕ ವ್ಯಾಧಿಯು ಕಾಡುತ್ತಿದ್ದರೆ, ಇನ್ನು ಕೆಲವರಿಗೆ ಶಾರೀರಿಕ ವ್ಯಾಧಿಗಳಿರುತ್ತವೆ. ಇಂತಹವರನ್ನು ಯಾರು ತಮ್ಮದಾಗಿಸಿಕೊಳ್ಳುವರೋ ಅವರನ್ನೇ ದೇವರೆಂದು ತಿಳಿಯಬೇಕು. ತುಕಾರಾಮರು ಹೇಳಿದಂತಹ ಈ ಮಾತು ನನಗೆ ಇಂದು ಈ ವರ್ತಮಾನ ಕಾಲದಲ್ಲಿ ಅನುಭವಿಸುವುದು ಸಾಧ್ಯವಾಯಿತು.

ನಾನು ಸಂತೋಷ್ ಲೋಲಯೇಕರ್, ನನ್ನ ಪತ್ನಿ ಜಯಮಾಲಾ ಮತ್ತು ನನ್ನ ಮಗಳು ನಿಷ್ಠಾಳೊಂದಿಗೆ ಗೋವಾದಲ್ಲಿರುವ ಮಡ್‌ಗಾಂವ್‌ನಲ್ಲಿ ವಾಸವಾಗಿದ್ದೇವೆ. ನನ್ನ ಪತ್ನಿಗೆ ದೇವರ ಮೇಲೆ ಅಪಾರ ಶ್ರದ್ಧೆಯಿದೆ. ನನ್ನ ಮಗಳು ನಿಷ್ಠಾ ಏಳನೇ ತರಗತಿಯವರೆಗೆ ಪ್ರತೀ ಕ್ಲಾಸಿನಲ್ಲಿಯೂ ಪ್ರಥಮ ಕ್ರಮಾಂಕದೊಂದಿಗೆ ಉತ್ತೀರ್ಣಳಾಗುವುದಷ್ಟೇ ಅಲ್ಲದೆ, ಆಕೆ ವಾಕ್‌ಸ್ಪರ್ಧೆ, ಗೀತಾ ಪಠಣ ಮುಂತಾದ ಅನೇಕ ಸ್ಪರ್ಧೆಗಳಲ್ಲಿಯೂ ಕೂಡಾ ಮೊದಲನೇ ಬಹುಮಾನವನ್ನು ಗಿಟ್ಟಿಸುತ್ತಾ ಬಂದಿರುವಳು. ಎಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ನನ್ನ ಆರೋಗ್ಯವು ಕುಸಿಯಿತು. ನನಗೆ ವಾಂತಿ ಮತ್ತು ಆಮ್ಲ ಪಿತ್ತದ ತೊಂದರೆಯಾಗತೊಡಗಿತು. ಊಟ ರುಚಿಸುತ್ತಿರಲಿಲ್ಲ, ನಿದ್ದೆ ಹತ್ತುವುದೇ ಕಡಿಮೆಯಾಯಿತು.

ತನ್ನ 8ನೇ ತರಗತಿಯ ಪರೀಕ್ಷೆ ಮುಗಿದುದರಿಂದ ನಿಷ್ಠಾಳು ತನ್ನ ಅಜ್ಜಿಯ ಮನೆಗೆ ಕಾರವಾರಕ್ಕೆ ಹೋಗಿದ್ದಳು. ನನ್ನ ಅತ್ತೆ-ಮಾವಂದಿರು ಯಾವಾಗಲೂ ನಮ್ಮ ಪ್ರತಿಯೊಂದು ಸುಖ ದುಃಖಗಳಲ್ಲಿ ನಮ್ಮೊಂದಿಗೆ ಸಹಭಾಗಿಯಾಗಿತ್ತಿದ್ದರು. ನಾನು ಹುಶಾರಿಲ್ಲದಿದ್ದರೂ ಕೂಡಾ ನಿಷ್ಠಾಳು ನಿಬಂಧ ಸ್ಪರ್ಧೆಯಲ್ಲಿ ಪ್ರಥಮ ಬಂದುದರಿಂದ ಆಕೆಯ ರಿಝಲ್ಟ್ ತೆಗೆದುಕೊಂಡು ಪತ್ನಿಯೊಂದಿಗೆ

ಕಾರಿನಲ್ಲಿ ಕಾರವಾರಕ್ಕೆ ಹೊರಟೆವು. ಡ್ರೈವಿಂಗ್‌ಗಾಗಿ ನಾನು ನನ್ನ ಮಿತ್ರನಾದ ರವೀಂದ್ರನನ್ನೂ ಜೊತೆಗೆ ಕರೆದುಕೊಂಡೆನು. ಪ್ರವಾಸ ಆರಂಭಿಸಿದ ಸ್ವಲ್ಪ ಹೊತ್ತಿನ ನಂತರ ನನಗೇನೋ ಮಂಪರು ಆವರಿಸಿದಂತಾಯಿತು. ನಂತರ ಎಚ್ಚರವಾದಾಗ ನಾನು ಮಡ್‌ಗಾಂವ್‌ನ ಗ್ರೇಸ್ ಹಾಸ್ಪಿಟಲ್‌ನಲ್ಲಿ ಮಲಗಿದ್ದೆನು. ಡಾಕ್ಟರ್‌ರು ಹೇಳಿದಂತೆ ನನ್ನ ಸ್ಕ್ಯಾನಿಂಗ್ ಮಾಡಿಸಿದಾಗ ನನ್ನ ಮೆದುಳಿನಲ್ಲಿ ಟ್ಯೂಮರ್ ಇರುವುದು ಪತ್ತೆಯಾಯಿತು.

ಮುಂಬಯಿಯಲ್ಲಿ ನನ್ನ ಪತ್ನಿಯ ಕಡೆಯ ಸಂಬಂಧಿಕರು ಅನೇಕರು ವಾಸವಾಗಿದ್ದ ಕಾರಣ ಮುಂದಿನ ಉಪಚಾರ ಮುಂಬಯಿಯ ಹಿಂದುಜಾ ಆಸ್ಪತ್ರೆಯಲ್ಲಿ ಮಾಡುವುದು ಎಂದು ನಿರ್ಧರಿಸಲಾಯಿತು. ಗ್ರೇಸ್ ಹಾಸ್ಪಿಟಲ್‌ನಿಂದ ಡಿಸ್‌ಚಾರ್ಜ್ ಪಡೆದು ನಂತರ ಕುಲದೇವತೆಯ ದರ್ಶನವನ್ನು ಪಡೆದು ನಾವು ಮೂವರು, ನನ್ನ ತಂಗಿ ಮತ್ತಾತ್ತೆಯ ಗಂಡ ಹೀಗೆ 5 ಜನರು ಮುಂಬಯಿಗೆ ಹೊರಟೇವು. ಎಂದಿನಂತೆ ನಾವು ಜಯಮಾಲಾಳ ಮಾವನವರಾದ ಮಂಜುನಾಥ ಬಾಂದೇಕರ್‌ರ ಮನೆಯಲ್ಲಿ ಇಳಿದುಕೊಂಡೆವು. ಅವರ ಮನೆ ಬಾಂದ್ರಾ ರೆಕ್ಲಮೇಶನ್‌ನಲ್ಲಿದೆ. ಆ ಮನೆಗೆ ಬಂದುದು ಒಂದು ರೀತಿಯಲ್ಲಿ ನನಗೆ ವರದಾನವೇ ಆಯಿತು. ಯಾಕೆಂದರೆ, ನಮ್ಮ ಈ ಮಾವ, ಅತ್ತೆ ಅವರ ಮಗಳು ಮತ್ತು ಅಳಿಯಂದಿರೆಲ್ಲರೂ ಬಾಪೂರವರ ಮೇಲೆ ನಿಸ್ಸೀಮ ಭಕ್ತಿಯನ್ನಿರಿಸಿಕೊಂಡಿದ್ದರು.

ಮುಂಬಯಿ ತಲುಪಿದ ನಂತರ ಮೊದಲು ಅಲ್ಲಿ ನನ್ನ ರಕ್ತ, ಕಣ್ಣು ಪರೀಕ್ಷೆ ಮತ್ತು ಎಂ.ಐ.ಆರ್ ಮುಂತಾದವುಗಳನ್ನೆಲ್ಲಾ ಮಾಡಿಸಿಕೊಂಡ ನಂತರ ನಾನು ಹಿಂದುಜಾ ಆಸ್ಪತ್ರೆಗೆ ಆಡ್ಮಿಟ್ ಆಗಲೆಂದು ಹೋಗುತ್ತಿರುವಾಗ ಅತ್ತೆಯವರು ಬಾಪೂರವರ ಒಂದು ಫೋಟೋವನ್ನು ನನ್ನ ಹತ್ತಿರ ಇಟ್ಟುಕೊಳ್ಳುವುದಾಕ್ಕಾಗಿ ಕೊಟ್ಟರು. ಆ ಪರಿವಾರದ ಸದಸ್ಯರಿಂದಾಗಿ ನನಗೆ ಬಾಪೂರವರ ಬಗ್ಗೆ ಬೇಕಾದಷ್ಟು ಮಾಹಿತಿ ದೊರಕಿತು. ಬಾಪೂರವರ ವಿಶೇಷಾಂಕ ಕೂಡಾ ಓದಿದೆನು. ನನ್ನ ಆರೋಗ್ಯವು ಮೆಲ್ಲಮೆಲ್ಲನೇ ಹದಗೆಡುತ್ತಿತ್ತು. ರಕ್ತದಲ್ಲಿ ಉಪ್ಪಿನಂಶವು ಹೆಚ್ಚಾದುದರಿಂದ ಅಪರೇಶನ್‌ನನ್ನು ಮುಂದೂಡಲಾಗುತ್ತಿತ್ತು. ನಾನು ಇನ್ನೂ ಹೆದರಿಕೊಂಡೆನು. ಆದರೆ, ಒಂದು ವಿಷಯ ಮಾತ್ರ ನಮ್ಮಿಬ್ಬರಿಂದಲೂ ನಿಯಮಿತವಾಗಿ ಜರುಗುತ್ತಿತ್ತು. ಅದೇನೆಂದರೆ ಬಾಪೂರವರ ನಾಮಸ್ಮರಣೆ ಓಂ ಮನಃ ಸಾಮರ್ಥ್ಯದಾತಾ ಶ್ರೀ ಅನಿರುದ್ಧಾಯ ನಮಃ ಆಸ್ಪತ್ರೆಯಲ್ಲಿ ಆಡ್ಮಿಟ್ ಆಗುವವರೆಗೂ ಬಾಪೂರವರ ಪ್ರತ್ಯಕ್ಷ ದರ್ಶನವೇನೂ ಆಗಿರಲಿಲ್ಲ. ಆದರೆ, ಅವರ ಭಾವಚಿತ್ರ ಮತ್ತು ನಾಮ ಮಾತ್ರ ನನ್ನೊಂದಿಗಿದ್ದಿತು. ಆಮೆಯು ಯಾವ ರೀತಿ ತನ್ನ ಮರಿಗಳನ್ನು

ದೂರದಿಂದಲೇ ತನ್ನ ಕಣ್ಣದೃಷ್ಟಿಯಿಂದಲೇ ಪೋಷಿಸುತ್ತಿರುತ್ತದೆಯೋ ಹಾಗೆಯೇ ಸದ್ಗುರು ಬಾಪೂರವರ ಗಮನ ಮಾತ್ರ ನಮ್ಮ ಮೇಲೆ ಸತತವಾಗಿಯೂ ಇದ್ದಿತು....ಎಂಬುದು ನಮಗೆ ನಂತರ ತಿಳಿಯಿತು.

ಯಾಕೋ ಏನೋ ಆ ದಿನ ಗುರುವಾರದಂದು ಜಯಮಾಲಳು ಒಮ್ಮೇಲೇ ನೀವೀಗ ಗುಣವಾಗುತ್ತೀರಿ, ನಿಮ್ಮ ರಕ್ತದಲ್ಲಿರುವ ಉಪ್ಪಿನ ಪ್ರಮಾಣವು ಕೂಡಾ ಸರಿಯಾಗುತ್ತದೆ ಎಂದಳು. ನಂತರ ನಾವಿಬ್ಬರೂ ಬಾಪೂರವರ ನಾಮಸ್ಮರಣೆ ಮಾಡುತ್ತಾ ನಿದ್ದೆ ಹೋದೆವು. ಮರುದಿವಸ ಬೆಳಿಗ್ಗೆ ಮಾಡಿದ ಎಲ್ಲಾ ಟೆಸ್ಟ್‌ಗಳೂ ನಾರ್ಮಲ್ ಆಗಿಯೇ ಬಂದವು ಹಾಗೂ ಶನಿವಾರದಂದು ಅಪರೇಶನ್ ಮಾಡುವುದೆಂದು ನಿರ್ಧರಿಸಲಾಯಿತು.

ಶನಿವಾರದ ಬೆಳಕು ಹರಿಯಿತು. ಬೆಳಿಗ್ಗೆ 10.30 ಘಂಟೆಗೆ ನನ್ನನ್ನು ಅಪರೇಶನ್ ಥಿಯೇಟರ್‌ನೊಳಗೆ ಕೊಂಡೊಯ್ಯಲಾಯಿತು. ಬಾಪೂರವರ ನಾಮಸ್ಮರಣೆ ನಡೆದೇ ಇತ್ತು, ನನ್ನ ಅಪರೇಶನ್ ಆಯಿತು. ನಂತರ ಸುಮಾರು 3.30 ಘಂಟೆಗೆ ನನ್ನನ್ನು ಐ.ಸಿ.ಸಿ.ಯು.ಗೆ ಸ್ಥಳಾಂತರಿಸಲಾಯಿತು. ರಾತ್ರಿ ಡಾಕ್ಟರ್‌ರು ನನ್ನ ಹತ್ತಿರ ಬಂದು ಮಲಗುವ ಪ್ರಯತ್ನ ಮಾಡಿರಿ ಎಂದು ಹೇಳಿದರು. ಆದರೆ ನಾನು ಎಷ್ಟೇ ಪ್ರಯತ್ನಿಸಿದರೂ ಕೂಡಾ ನನಗೆ ನಿದ್ರೆಯೇ ಬರಲೊಲ್ಲದು. ಮುಂಜಾನೆ ಸುಮಾರು 4 ಘಂಟೆಯ ಸಮಯದಲ್ಲಿ ನನ್ನ ಕೈಗೆ ಯಾರೋ ತಟ್ಟಿದಂತಾಯಿತು ಹಾಗೂ ಕಿವಿಗಳಿಗೆ ಸ್ಪಷ್ಟವಾಗಿ ಭಯ ಪಡಬೇಡ ಎಂಬ ಶಬ್ದಗಳು ಕೇಳಿಸಿದವು. ನನ್ನ ಕಣ್ಣಮುಂದೆ ಸಾಕ್ಷಾತ್ ಬಾಪೂರವರ ರೂಪವು ಕಾಣುತ್ತಿದ್ದಿತು. ನಾನು ಧನ್ಯನಾದೆನು. ಬೆಳಿಗ್ಗೆ ಡಾಕ್ಟರ್ ಬಂದು ನನ್ನನ್ನು ಅಭಿನಂಧಿಸಿ ನಿಮ್ಮ ರಿಕವರಿ ತುಂಬಾ ಚೆನ್ನಾಗಿ ಆಗುತ್ತಿದೆ ಎಂದು ಹೇಳಿ ನನ್ನನ್ನು ವಾರ್ಡಿಗೆ ವರ್ಗಾಯಿಸಿದರು. ನನ್ನ ಆರೋಗ್ಯವು ತುಂಬಾ ತೀವ್ರವಾಗಿ ಸುಧಾರಿಸಿಕೊಂಡಿತು. ಮುಂದಿನ ಶನಿವಾರವೇ ನಾನು ಡಿಸ್‌ಚಾರ್ಜ್ ಪಡೆದು ಗೋವಾಕ್ಕೆ ಹಿಂತಿರುಗಿದೆನು. ಒಂದು ತಿಂಗಳ ನಂತರ ನನ್ನನ್ನು ಚೆಕಪ್‌ಗಾಗಿ ಕರೆಸಿದ್ದರು. ನನ್ನ ಸುದೈವಕ್ಕೆ ಹಿಂದುಜಾ ಆಸ್ಪತ್ರೆಯಲ್ಲಿ ಕೆಲಸಕ್ಕೆ ಬಾಪೂ ಭಕ್ತರಾದ ಶ್ರೀ ರವಿ ಕೇಂಕ್ರೆ ಮತ್ತು ಬ್ಲಡ್ ಬ್ಯಾಂಕ್‌ನಲ್ಲಿದ್ದ ಕು. ಸಂಗೀತಾ ಕಲಗುಟಕರ್‌ರವರು ತುಂಬಾ ಸಹಾಯ ಮಾಡಿದ್ದರು.

ಈಗ ನನ್ನ ಈ ಜೀವನವೆಂದರೆ ನನಗೆ ನನ್ನ ಬಾಪೂರವರಿಂದ ಲಭಿಸಿದ ಪುನರ್ಜನ್ಮವೇ ಎಂದು ನಾನು ತಿಳಿದಿದ್ದೇನೆ. ಎಷ್ಟು ದೊಡ್ಡ ಸಂಕಷ್ಟದಿಂದ ಬಾಪೂ ನನ್ನನ್ನು ಹೂವಿನಂತೆ ಹೊರ ತೆಗೆದಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಶತಶಃ ದಂಡವತ ನಮಸ್ಕಾರಗಳು. ಇನ್ನು ಮುಂದೆ ನನಗೆ ಬಾಪೂರವರ

ಸೇವಾ ಕಾರ್ಯಗಳಲ್ಲಿ ಸಹಭಾಗಿಯಾಗುವ ಅವಕಾಶ ಲಭಿಸಲಿ ಹಾಗೂ ಅವರ ಚರಣಗಳ ಮೇಲೆ ನನ್ನ ಶೃದ್ಧೆ ಅಧಿಕಾಧಿಕವಾಗಿ ಬೆಳೆದು ದೃಢವಾಗಲಿ ಎಂಬುದೊಂದೇ ನನ್ನ ಬಾಪೂರವರ ಚರಣಾರವಿಂದಗಳಲ್ಲಿ ಪ್ರಾರ್ಥನೆ.

ANUBHAVS

# HARI OM

© Copyright 2010, Manasamarthyadata.com

manasamarthyadata.com